ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಹಕಾರ ಕೃಷಿ ಸಂಘಗಳು ಸರ್ಕಾರದ ನಿರೀಕ್ಷಣೆ ಮುಟ್ಟುವುದಕ್ಕೋಸ್ಕರ ಏನೇನು ಅನುಕೂಲಗಳನ್ನು ಕಲ್ಪಿಸಿಕೊಡಬೇಕು, ಮೇಲ್ವಿಚಾರಣೆ ಏನು ಮಾಡಬೇಕು ಅನ್ನುವುದಕ್ಕೆ ಏನು ವ್ಯವಸ್ಥೆ ಯೋಜನೆ ಮಾಡಿದ್ದೀರಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಆಗಲೇ ಹೇಳಿದ್ದೇವೆ. ನಾವು ಕೊಡತಕ್ಕಂಥ financial assistance ಆಲ್ಲದೆ, ಇಲಾಖೆಗಳ ಮುಖಾಂತರ ಕ್ರಾಷ್‌ಕ್ರೆಡಿಟ್ ಮುಂತಾದ ಸಹಾಯ ಪಡೆದು ಕೊಳ್ಳುವ ಪದ್ಧತಿ ಇದೆ. ಡೈರಿ ಕೋ-ಆಪರೇಟಿವ್, ಪೌಲ್ಟ್ರಿ ಫಾರ್ಮಿಂಗ್ ಮುಂತಾದ ಪ್ರೋಗ್ರಾಂ ಇಟ್ಟುಕೊಳ್ಳಲು ಏನೇನು ಸಹಾಯ ಬೇಕೋ ಅದನ್ನು ಪಡೆದುಕೊಂಡು ಆರ್ಥಿಕ ಅಭಿವೃದ್ಧಿ ಮಾಡಿಕೊಳ್ಳಬೇಕು ಅನ್ನುವುದು ಸರ್ಕಾರದ ಇಚ್ಛೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮೈಸೂರು ಡಿಸ್ಟ್ರಿಕ್ಟಿನಲ್ಲಿ 1960 ರಿಂದಲೂ 300—400 ಎಕರೆ ಇಟ್ಟುಕೊಂಡಿರುವ ಸೊಸೈಟಿಗಳಿವೆ. 10-11 ಮೆಂಬರುಗಳು ಸೊಸೈಟಿಬುಲ್ಲಿದ್ದಾರೆ. ಆ ಸೊಸೈಟಿಗಳಿಗೆ ಬೇಕಾದ ಸಹಾಯ ಮಾಡಿದ್ದೇವೆಂದು ಹೇಳಲಿಲ್ಲ. ಈಗ ಎಕರೇಟ್ ಬೇಸಿಸ್ ಮೇಲೆ ಬತ್ತವನ್ನು ತೆಗೆದುಕೊಳ್ಳಬೇಕೆಂದು, ಸ್ಪೆಷರ್ ಲೆವಿ ಮಾಡಿದ್ದೀರಿ. 10 ಜನ ಸೇರಿಕೊಂಡು ಸೊಸೈಟಿ ನಡೆಸಕ್ಕಂಥ ಜನಗಳಿಂದ ಜಾಸ್ತಿ ಧಾನ್ಯ ಶೇಖರಿಸುವುದಕ್ಕೆ ಪ್ರತ್ಯೇಕ ಅರ್ಡರ್ ಇದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಎಲ್ಲರಿಗೂ ಒಂದೇ ಅರ್ಡರ್.

ಶ್ರೀ ಬಿ. ಎಲ್. ಗೌಡ.—ಚಳ್ಳಕೆರೆ ತಾಲ್ಲೂಕಿನಲ್ಲಿ ಪೈಲೆಟ್ ಪ್ರಾಜೆಕ್ಟ್ ಸೊಸೈಟಿ ಎಷ್ಟು ಪ್ರಾರಂಭವಾಗಿವೆ ? ಒಂದೊಂದು ಸೊಸೈಟಿಯಲ್ಲಿಯೂ ಎಷ್ಟೆಷ್ಟು ಸದಸ್ಯರಿದ್ದಾರೆ ?

ಶ್ರೀ ಕೊಂಡಜ್ಜಿ ಬಸಪ್ಪ.—A long list is placed on the table of the House ; ಹೇಳಬೇಕೆಂದರೆ ಹೇಳುತ್ತೇನೆ.

Mr. SPEAKER.—He wants the total number.

ಶ್ರೀ ಕೊಂಡಜ್ಜಿ ಬಸಪ್ಪ.—There are only six in Chitradurga District. ಚಳ್ಳಕೆರೇದು ಯಾವುದೂ ಇಲ್ಲವಲ್ಲಾ.

ಶ್ರೀ ಬಿ. ಎಲ್. ಗೌಡ.—ಒಂದು ಪೈಲೆಟ್ ಪ್ರಾಜೆಕ್ಟ್ ಇದೆ. ಈ ಲಿಸ್ಟಿನಲ್ಲಿ ಕೊಟ್ಟಿಲ್ಲ. ಏತಕ್ಕೋಸ್ಕರ ಕೊಟ್ಟಿಲ್ಲ.

Sri KONDAJJI BASAPPA.—I will find out. It may be an incorrect information supplied.

Mr. SPEAKER.—I will hold over the Question.

Sale of Potato seeds.

*Q.—406. Sri H. D. DEVE GOWDA (Holenarasipur)

Will the Government be pleased to state :—

(*a*) the amount of profit or loss due to sale of potato seeds during 1962-63 and 1963-64 by the Mysore State Marketing Co-operative Society ;

(*b*) the reasons for the loss, if any, and the action taken on persons responsible for the same ?

A.—Sri KONDAJJI BASAPPA (Deputy Minister for Co-operation).—

(*a*)	*Year*	*Profit* Rs.	*Loss.* Rs.
	1962-63	19,400	—
	1963-64	—	1,25,000

(SRI KONDAJJI BASAPPA)

(b) (i) The potato seeds were received when the season was practically over.

(ii) The market rates were low for want of demand.

(iii) In the absence of a ready market, large quantities deteriorated and perished before they could be disposed of.

A suit has been filed in the Court of the Additional Civil Judge, Civil Station, Bangalore, against the suppliers.

ಶ್ರೀ ಎಚ್. ಡಿ. ದೇವೇಗೌಡ.—1963-64 ನೆಯ ಸಾಲಿನಲ್ಲಿ 1,25,000 ರೂಪಾಯಿ ನಷ್ಟ ಎಂದು ತಿಳಿಸಿದ್ದೀರಿ. State Marketing Co-operative Societyಗೆ ಆಗಿರತಕ್ಕಂಥ ನಷ್ಟ ಮಾತ್ರ ಕಂಡು ಬಂದಿದೆ. ಪ್ಯೈಮರಿ ಮತ್ತು ತಾಲ್ಲೂಕು ಮಟ್ಟದಲ್ಲಿರತಕ್ಕಂಥ ಕೆಲವು Marketing Co-operative Societyಗಳಿಗೆ ಮತ್ತು State Marketing Co-operative Societyಗೆ ಉಂಟಾಗಿರತಕ್ಕಂಥ ಒಟ್ಟು ನಷ್ಟ 8 ಲಕ್ಷ ರೂಪಾಯಿ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ನಿಮ್ಮ ಪ್ರಶ್ನೆಯಲ್ಲಿ State Marketing Co-operative Societyಗೆ ಆದ ನಷ್ಟ, ಲಾಭ ಎಷ್ಟು ಎಂದು ಕೇಳಿದ್ದೀರಿ, ಅಷ್ಟು ಮಾತ್ರ ಕೊಟ್ಟಿದೆ. ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗೆ ಸೆಂಟ್ರಲ್ ಸ್ವೀಟು ಮಾರ್ಕೆಂಟಿಂಗ್ ಕೋ-ಆಪರೇಟಿವ್ ಸೊಸೈಟಿಯವರು ಆಲೂಗೆಡ್ಡೆ ಬೀಜಗಳನ್ನು ಸಪ್ಲೈ ಮಾಡಿರತಕ್ಕದ್ದು ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಸ್ವೀಟು ಮಾರ್ಕೆಟಿಂಗ್ ಕೋ-ಆಪರೇಟಿವ್ ವಿಚಾರದ ಬಗ್ಗೆ ಇಲ್ಲ ಪ್ರಶ್ನೆ ಕೇಳಿರುವುದರಿಂದ ಅದರ ಬಗ್ಗೆ ಮಾತ್ರ ವಿವರಗಳನ್ನು ಕೊಡಲಾಗಿದೆ. ತಾಲ್ಲೂಕಾ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಯ ಬಗ್ಗೆ ಇಲ್ಲ ವಿವರಗಳಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆಲೂಗೆಡ್ಡೆ ಬೀಜಗಳನ್ನು ಕಾಲಕ್ಕೆ ಮುಂಚೆ ಒದಗಿಸುವುದಕ್ಕೆ ಸೊಸೈಟಿಗಳವರು ಪ್ರಯತ್ನ ಮಾಡಲಿಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ವರ್ಷ ಎಂದರೆ 1964-65ನೇ ಸಾಲಿನಲ್ಲಿ ಸಕಾಲದಲ್ಲಿ ಬೀಜಗಳನ್ನು ಒದಗಿಸಿದ್ದಾರೆ.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಆಲೂಗೆಡ್ಡೆ ಬೀಜಗಳನ್ನು ವ್ಯಾಪಾರ ಮಾಡಲು ಕೆಲವು ಮುಖಂಡರುಗಳು ಸೊಸೈಟಿಗಳಲ್ಲಿ ಸೇರಿಕೊಂಡು ಬೀಜಗಳನ್ನು ತರಿಸಿ ಅದನ್ನು ಬ್ಲಾಕು ಮಾರ್ಕೆಟ್ಟಿನಲ್ಲಿ ಮಾರಿಕೊಂಡು ಲಾಭ ಸಂಪಾದನೆ ಮಾಡಿಕೊಂಡಿರುವುದು ಸರಕಾರಕ್ಕೆ ದ್ರೋಹ ಮಾಡಿದಂತಾಗಲಿಲ್ಲವೇ ಮತ್ತು ಅದು ಸರಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಸರಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಸರಕಾರದ ಗಮನಕ್ಕೆ ನಾವು ತಂದರೆ ಅಂತಹವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.— ಖಂಡಿತ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಸ್ವೀಟ್ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಅಧ್ಯಕ್ಷರಾಗಿರುವವರು ಆಲೂಗೆಡ್ಡೆ ಬೀಜಗಳನ್ನು ತರಿಸಿ ಲಾಭದಾಯಕವಾಗಿ ಅದನ್ನು ಮಾರದೆ ಅಲ್ಲಿರುವ ಸದಸ್ಯರುಗಳೊಡನೆ ಹೆಚ್ಚು ಬೆಲೆಗೆ ಮಾರಿ ದುರುಪಯೋಗ ಮಾಡುತ್ತಿದ್ದಾರೆ ಎಂದು ಸರಕಾರಕ್ಕೆ ದೂರುಗಳು ಬಂದಿದ್ದರೂ ಕೂಡ ಇಂತಹ ಅವ್ಯವಸ್ಥೆಗಳನ್ನು ಸರಕಾರದವರು ಇದುವರೆಗೂ ಸರಿಪಡಿಸದೇ ಇರಲು ಕಾರಣಗಳೇನು ?

ಶ್ರೀ ಕೊಂಡಜ್ಜಿ ಬಸಪ್ಪ.—ಹಾಗೇನಲ್ಲ. ಇದರಲ್ಲಿ ಅಂತಹ ನಷ್ಟವೇನೂ ಆಗಿಲ್ಲ. ಹೋದ ವರ್ಷ ಸ್ವಲ್ಪ ನಷ್ಟವಾಗಿದೆ. ಅದಕ್ಕೆ ಹಿಂದಿನ ಸಾಲಿನಲ್ಲಿ ಲಾಭ ಬಂದಿದೆ ಮತ್ತು ಈ ಸಾಲಿನಲ್ಲಿ ಎಂದರೆ 1964-65ರಲ್ಲಿ ಸ್ವಲ್ಪ ಲಾಭ ಬಂದಿದೆ. 1963-64ರಲ್ಲಿ ಮಾತ್ರ 1,25,000 ರೂಪಾಯಿಗಳಷ್ಟು ನಷ್ಟವಾಗಿದೆ ಎಂದು ಉತ್ತರದಲ್ಲೇ ಕೊಟ್ಟಿದೆ. ಇದಕ್ಕೆ ಕಾರಣ ಸಕಾಲದಲ್ಲಿ ರಂಗೂನು ಕಡೆಯಿಂದ ಬರಬೇಕಾದ ಆಲೂಗೆಡ್ಡೆ ಬೀಜಗಳು ರೈತರಿಗೆ ಇಲ್ಲಿ ತಲುಪಲಿಲ್ಲ. ಅದುದರಿಂದ ರೈತರು ಅದನ್ನು ಉಪಯೋಗಿಸದೆ ಹೋದುದರಿಂದ ಅವು ಹಾಳಾಗಿ ಹೋದವು, ಆದರಿಂದ ಸ್ವಲ್ಪ ನಷ್ಟವಾಯಿತು.

ಶ್ರೀ ಸಿ. ಸಿದ್ದಯ್ಯ ಕಾಶೀಮಠ.—ಸ್ಟೇಟು ಮಾರ್ಕೆಟಿಂಗ್ ಸೊಸೈಟಿಯವರು ಈ ಆಲುಗೆಡ್ಡೆ ಬೀಜಗಳನ್ನು ಯಾವಯಾವ ಊರುಗಳಿಂದ ಆಮದು ಮಾಡುತ್ತಿದ್ದಾರೆ?

ಶ್ರೀ ಕೊಂಡಜ್ಜಿ ಬಸಪ್ಪ.—ಬರ್ಮಾ ದೇಶದಲ್ಲಿರುವ ರಂಗೂನು ಕಡೆಯಿಂದ ಸ್ವಲ್ಪ ಭಾಗ ಬರುತ್ತದೆ ಮತ್ತು ಸಿಮ್ಲಾದ ಕಡೆಯಿಂದಲೂ ಸ್ವಲ್ಪ ಬರುತ್ತದೆ.

ಶ್ರೀ ಕೆ. ಲಕ್ಕಪ್ಪ.—ಸೊಸೈಟಿಗಳವರು ಆಲೂಗೆಡ್ಡೆ ಬೀಜಗಳನ್ನು ತರಿಸಿ ವ್ಯಾಪಾರ ಮಾಡುವಾಗ ಸುಮಾರು 8 ಲಕ್ಷದಷ್ಟು ಲಾಸ್‌ಆಗಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೊಂಡಜ್ಜಿ ಬಸಪ್ಪ.—ಇದರಲ್ಲಿ ಕೊಚ್ಚಿರುವ ಉತ್ತರವನ್ನು ತಾವು ನೋಡಿದರೆ ಎಷ್ಟು ಲಾಭವಾಗಿದೆ. ಮತ್ತು ಎಷ್ಟು ನಷ್ಟವಾಗಿದೆ ಎನ್ನುವುದು ಗೊತ್ತಾಗುತ್ತದೆ. ಒಂದು ವರ್ಷ ಮಾತ್ರ ಸ್ವಲ್ಪ ನಷ್ಟವಾಗಿದೆ. ಈ ಸಾಲಿನಲ್ಲಿ ನಮಗೆ ಸುಮಾರು 25 ಸಾವಿರದಷ್ಟು ಲಾಭ ಬಂದಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ಟೇಟು ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಯವರು ಆಲೂಗೆಡ್ಡೆ ಬೀಜಗಳನ್ನು ತರಿಸುತ್ತಿದ್ದರೂ ಅದನ್ನು ರೈತರಿಗೆ ಸರಿಯಾಗಿ ಹಂಚದೆ ಬ್ಲಾಕ್‌ಮಾರ್ಕೆಟ್‌ನಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಿ ಸರಕಾರದವರು ಸುವ್ಯವಸ್ಥೆಯಿಂದ ಸಕಾಲದಲ್ಲಿ ಈ ಬೀಜಗಳನ್ನು ಹಂಚುವ ಕ್ರಮ ತೆಗೆದುಕೊಳ್ಳುತ್ತಿರಾ?

Sri KONDAJJI BASAPPA.—This year I personally went to Simla and contacted the authorities of Co-operative Marketing Societies and of Himachala pradesh who supplied best variety of seeds and they are getting profit also. Hereafter, the State Co-operative Marketing Society here is supplying seeds and arrangements have been made with regard to this. ಆದುದರಿಂದ ಯಾವಾಗಲೂ ನಾವು ಕೋ-ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿಗಳ ಮುಖಾಂತರ ವ್ಯಾಪಾರ ಮಾಡಿದರೆ ಜನರಿಗೆ ಬಹಳ ಅನುಕೂಲವಾಗುತ್ತದೆ ಎಂದು ಅದರ ಮೂಲಕ ನ್ಯಾಯವಾಗಿ ಹಂಚಿಕೆ ಮಾಡಬೇಕೆಂದು ಸೊಸೈಟಿಗಳ ಮೂಲಕ ಈ ಬಿತ್ತನೆ ಬೀಜಗಳನ್ನು ತರಿಸಿ ಹಂಚುವ ವ್ಯವಸ್ಥೆ ಮಾಡಲಾಗುತ್ತಿದೆ. ಅಲ್ಲದೆ ಬೀಜಗಳನ್ನು ಹಂಚುವ ಏಜನ್ಸಿಗಳವರು ಸಕಾಲದಲ್ಲಿ ಅಗ್ರಿಮೆಂಟು ಪ್ರಕಾರ ಹಂಚದೇ ಹೋದರೆ ಅವರ ಮೇಲೆ ದಾವಾಗಳನ್ನು ಕೂಡ ಹಾಕಲು ಕ್ರಮ ಕೈಗೊಳ್ಳಲಾಗುತ್ತಿದೆ, ಹಿಂದಿನ ವರ್ಷ ಎಂದರೆ ಹೋದ ಸಾರಿಯಲ್ಲಿ ಅದಕ್ಕೆ ಹಿಂದಿನ ವರ್ಷದಲ್ಲಿ ಮತ್ತು ಈ ಸಾಲಿನಲ್ಲಿ ಬೀಜಗಳನ್ನು ಮಾರಿದುದರಿಂದ ಸ್ವಲ್ಪ ಮಟ್ಟಿನ ಲಾಭ ಬಂದಿದೆ. ಸರಿಯಾಗಿ ಸಕಾಲದಲ್ಲಿ ಬೀಜಗಳನ್ನು ಸರಬರಾಜು ಮಾಡದೇ ಇದ್ದರೆ ಅಂತಹವರ ಆರ್ಡರುಗಳನ್ನೂ ವಜಾ ಮಾಡಲಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮೈಸೂರು ಸಂಸ್ಥಾನದಲ್ಲಿ ಒಟ್ಟು ಎಷ್ಟು ಆಲೂಗೆಡ್ಡೆ ಬೀಜಗಳನ್ನು ತರಿಸಿದ್ದಾರೆ ಎನ್ನುವ ಅಂಕೆ ಅಂಶಗಳನ್ನು ಸರಿಯಾಗಿಟ್ಟಿದ್ದಾರೆಯೇ? ಹಾಗಿದ್ದರೆ ಈ ಬೀಜವನ್ನು 80 ರೂಪಾಯಿಗಳಂತೆ ಮಾರಬೇಕೆಂದು ಇದ್ದರೂ ಅದನ್ನು 180 ರೂಪಾಯಿಗಳ ಬೆಲೆಯಲ್ಲಿ ಮಾರಿರುವ ನಿದರ್ಶನಗಳು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೊಂಡಜ್ಜಿ ಬಸಪ್ಪ.—ಇದರೊಳಗೆ ವರ್ತಕರುಗಳು ಹಾಗೂ ರೈತರುಗಳು ಇದ್ದಾರೆ. ರೇಟು ಬಗ್ಗೆ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರು ಆಯಾ ತಾಲ್ಲೂಕಾ ಮಾರ್ಕೆಟಿಂಗ್ ಸೊಸೈಟಿಗಳ ಮುಖಾಂತರ ಮಾರಬೇಕೆಂದು ಕಳುಹಿಸಲಾಗುತ್ತದೆ. ಅಲ್ಲಿ ಹೇಗೆ ವಾರಾಟ ಮಾಡುತ್ತಾರೆನ್ನುವುದು ಅಲ್ಲಿರುವ ಜನಕ್ಕೆ ಗೊತ್ತಾಗುತ್ತದೆ.

Sri S. SIVAPPA.—Is it not a fact that a big racket is going on in the State Marketing Society, and what steps the Government is going to take to make enquiry about this?

ಶ್ರೀ ಕೊಂಡಜ್ಜಿ ಬಸಪ್ಪ.—ಅಂತಹ ಪ್ರಸಂಗವೇನೂ ಕಂಡು ಬಂದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಭತ್ತಗಳನ್ನು ಒದಗಿಸುವ ಕಾಲವಾವುದು ಎನ್ನುವುದನ್ನು ಸಿದ್ಧಿಪ್ಪಮಾಡಿ ಕಾಲಕ್ಕೆ ಸರಿಯಾಗಿ ಒದಗಿಸುತ್ತಿದ್ದಾರೆಯೇ ಎನ್ನುವುದನ್ನು ಸರಕಾರದವರು ಗಮನಿಸಿದ್ದಾರೆಯೇ?

ಶ್ರೀ ಕೊಂಡಜ್ಜಿ ಬಸಪ್ಪ.—ಕಾಲಕ್ಕೆ ಸರಿಯಾಗಿ ಬೀಜಗಳನ್ನು ಒದಗಿಸಬೇಕೆಂದು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಆದರೆ ಇದರಲ್ಲಿ ಹೇಳಿರುವಂತೆ ಆ ಸಾರಿ ಒಂದು 15 ದಿನಗಳು ಲೇಟಾಗಿ ಬೀಜಗಳು ಬಂದುದರಿಂದ ಅಷ್ಟುಹೊತ್ತಿಗೆ ರೈತರುಗಳು ಬೇರೆ ಎಲ್ಲಿಂದಲೋ ಬೀಜಗಳನ್ನು ತರಿಸಿ ಬಿತ್ತನೆಮಾಡಿದುದರಿಂದ ನಾವು ತರಿಸಿದ ಬೀಜಗಳು ಡಿಟೀರಿಯಾರೇಟು ಆಗಲು ಅವಕಾಶವಾಯಿತು ಮತ್ತು ಸ್ವಲ್ಪ ನಷ್ಟವಾಯಿತು.

Sri SIVAPPA.—Has the State Marketing Society got equipment like cold storage to store its purchases in a place where it cannot be spoiled?

ಶ್ರೀ ಕೊಂಡಜ್ಜಿ ಬಸಪ್ಪ.—ಕೋಲ್ಡ್ ಸ್ಟೋರೇಜು ನಮ್ಮಲ್ಲಿಲ್ಲ. ಈಚೆಗೆ ದೆಹಲಯಲ್ಲಿರುವ ಸೆಂಟ್ರಲ್ ರೀಸರ್ಚ್ ಇನ್ಸ್‌ಟಿಟ್ಯೂಟಿನ ಕೋಲ್ಡ್ ಸ್ಟೋರೇಜು ತಜ್ಞರು ಈ ದೇಶಕ್ಕೆ ಬಂದು ಎಲ್ಲೆಲ್ಲಿ ಕೋಲ್ಡ್ ಸ್ಟೋರೇಜುಗಳನ್ನು ಮಾಡಬೇಕು ಎನ್ನುವುದರ ಬಗ್ಗೆ ಒಂದು ರಿಪೋರ್ಟನ್ನು ಸರಕಾರಕ್ಕೆ ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತಲಿದ್ದೇವೆ.

Sri S. SIVAPPA.—In the absence of this equipment, what does this State Marketing Co-operative Society do to deal with the purchases which are liable to be spoiled?

ಶ್ರೀ ಕೊಡಜ್ಜಿ ಬಸಪ್ಪ.—ಈಗ ಕೋಲ್ಡ್ ಸ್ಟೋರೇಜು ಇಲ್ಲ, ಗೋದಾನುಗಳಿವೆ. ಅವನ್ನು ತಾಲ್ಲೂಕಾ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಗಳವರು ಉಪಯೋಗ ಮಾಡಿ ಕೊಳ್ಳುತ್ತಲಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ತಾಲ್ಲೂಕಾ ಮಾರ್ಕೆಟಿಂಗ್ ಸೊಸೈಟಿಗಳ ಮೂಲಕ ಹಂಚಿಕೆ ಯಾಗುತ್ತಿರುವ ಬೀಜಗಳನ್ನು ತಪ್ಪಿಸಬೇಕಾದರೆ ಸಂಸ್ಥಾನದಲ್ಲರುವ ಎಲ್ಲ ಭಾಗಗಳಿಗೂ ಎಷ್ಟು ಬಿತ್ತಗಳು ಬೇಕಾಗಿವೆ ಎನ್ನುವುದನ್ನು ಅಲ್ಲಲ್ಲಿರುವ ಡಿಸ್ಟ್ರಿಕ್ಟ್ ಅಗ್ರಿಕಲ್‌ಚರು ಅಫೀಸರುಗಳಿಂದ ರಿಪೋರ್ಟನ್ನು ತರಿಸಿಕೊಂಡು ಸೊಸೈಟಿಗಳಿಗೆ ಎಷ್ಟು ಬೇಕೋ ಅಷ್ಟನ್ನೂ ಹಂಚುವ ಏರ್ಪಾಡು ಮಾಡುತ್ತಾರೆಯೇ? ಇದರ ಜೊತೆಗೆ ಸಹಕಾರ ಸಂಘಗಳಿಗಿಂತ ಸಹಕಾರ ಇಲಾಖೆಯ ಡೈರೆಕ್ಟರುಗಳು, ಅಗ್ರಿಕಲ್ಚರು ಡೈರೆಕ್ಟರು ಇವುಗಳಲ್ಲಿ ನದಸ್ಯರಾಗಿ ನೇಮಕಮಾಡಿ ಇವುಗಳಲ್ಲಿ ಏನು ದೋಷದೋಷಗಳಿವೆ ಎನ್ನುವುದನ್ನು ನೋಡಿಕೊಂಡು ಮುಂಜಾಗರೂಕತೆಯ ಕಾರ್ಯಕ್ರಮ ವನ್ನು ತೆಗೆದುಕೊಳ್ಳುವುದು ಒಳ್ಳೆಯದಲ್ಲವೇ?

ಶ್ರೀ ಕೊಂಡಜ್ಜಿ ಬಸಪ್ಪ.—ಯಾವ ಯಾವಕಾಲಕ್ಕೆ ಎಷ್ಟು ಬಿತ್ತಗಳು ಬೇಕು ಎನ್ನುವುದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ವರದಿ ಕಳುಹಿಸಿದ ಮೇಲೆ ಅದಕ್ಕೆ ತಕ್ಕ ಇನ್ಸ್‌ಟ್ರಕ್ಷನ್ನುಗಳನ್ನು ಕೊಟ್ಟು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

9-00 A.M.

Sri S. M. KRISHNA.—Sir, in the past three years, many references to this Society have been made and here there is the answer where deliberately there is a loss of Rs. 1,25,000. Are you convinced with the answers furnished by the Deputy Minister for Co-operation? This is the most unsatisfactory answer and we cannot swallow the answer. Further, when the Hon'ble the Leader of the Opposition shows that there is need for an enquiry into the affairs of this Society, the Deputy Minister says that there is no need.

Mr. SPEAKER.—Parliamentary procedure will have to be revised if the Speaker is called upon to form opinion on the merits of the answers

Sri S. M. KRISHNA.—I would request you to tell us as a senior Member of the House and not as the Speaker.

Mr. SPEAKER.—It can not be done when I am occupying the Chair.

Sri S. M. KRISHNA.—Obviously you are not convinced with the answer furnished by the Deputy Minister.